"ಅರೆ ಹೌದಲ್ಲ! ಈ ಬಟ್ಟೆಗಳು ನಿನ್ನ ಮೈಮೇಲೆ ಚನ್ನಾಗಿ ಕಾಣಿಸುತ್ತವೆ" ಎಂದೆ. ಸುಷ್ಮಾ ಕೂಡಾ ಕಿಚನ್ನಿನಿಂದ ಹೊರಬಂದು, "ಸಾಥಿಯಾ ಭಾಯಿ, ಇಂದು ನೀನು ಬಹಳ ಸ್ಮಾರ್ಟಾಗಿ ಕಾಣಿಸುತ್ತಿರುವಿ. ಯಾವುದಾದರೂ ಕಾರ್ಯಕ್ರಮಕ್ಕೆ ಹೊರಟಿರುವೆಯಾ?" ಕೇಳಿದಳು ಸುಷ್ಮಾ.

"ಪಕ್ಕದ ಬಿಲ್ಡಿಂಗ್‌ನಲ್ಲಿರುವ ಶೋಭನಾಳ ಮದುವೆ ಇಲ್ಲಿಯೇ ಬಾಂದ್ರಾದಲ್ಲಿದೆ. ಅವಳ ಅಪ್ಪ ನನ್ನನ್ನು ಆಮಂತ್ರಿಸಿದ್ದಾನೆ" ಎಂದು ಹೇಳುವಾಗ ಸಾಥಿಯಾನ ಮುಖದಲ್ಲಿ ಹೊಳಪಿತ್ತು.

"ವಧುವರರಿಗೆ ನಮ್ಮ ಶುಭಾಶಯಗಳನ್ನು ತಿಳಿಸು" ನಾನು ನಗುತ್ತ ಹೇಳಿದೆ.

ಸಾಥಿಯಾ ಎಂದಿನಂತೆ ನಗುತ್ತ ಹೋದ.

ನಾನು ತಂದೆಯವರನ್ನು ನಿಯಮಿತವಾಗಿ ಡಯಾಲಿಸಿಸ್ಸಿಗೆ ಆಸ್ಪತ್ರೆಗೆ ಕರೆದೊಯ್ಯುತ್ತಿದ್ದೆವು. "ನಾನು ನನ್ನ ಬದುಕನ್ನು ಸಾಕಷ್ಟು ಸವಿದದ್ದಾಗಿದೆ. ಇನ್ನು ನನಗೆ ಶಾಂತಿಯಿಂದ ನಿರ್ಗಮಿಸಲು ಬಿಡಿ" ಎಂದು ಅಪ್ಪ ಹೇಳುತ್ತಲೇ ಇದ್ದರು. ಮಶಿನ್ನಿನ ಸಹಾಯದಿಂದ ಬದುಕಿರುವುದು ಅವರಿಗೆ ಇಷ್ಟವಿರಲಿಲ್ಲ.

ಒಂದು ದಿನ ತಂದೆಯವರ ಡಯಲಿಸಿಸ್ಸಿಗಾಗಿ ಕಾಯುತ್ತ ನಾವು ಆಸ್ಪತ್ರೆಯಲ್ಲಿ ಕುಳಿತಿದ್ದೆವು. ಒಮ್ಮೆಲೇ ಅವರಿಗೆ ಬ್ರೇನ್ ಹ್ಯಾಮರೇಜ್ ಆಯಿತು. ಮತ್ತು ಅವರು ಕೋಮಾಕ್ಕೆ ಜಾರಿದರು. ಎರಡು ದಿನ ಕೋಮಾದಲ್ಲಿಯೇ ಕಳೆದರು. ಮರುದಿನ ಅವರು ಕೊನೆಯುಸಿರೆಳೆದರು.

ಕೂಡಲೇ ಸಾಥಿಯಾ ನನ್ನ ಬಳಿ ಬಂದು, "ಸಾರ್, ಅರ್ಥಿಯ ಸಾಮಾನುಗಳನ್ನು ತರಲು ನನಗೆ ಹಣವನ್ನು ಕೊಡಿ. ಪುರೋಹಿತನೊಬ್ಬ ನನ್ನ ಪರಿಚಯದವನಿದ್ದಾನೆ. ಅರ್ಧ ಗಂಟೆಯಲ್ಲಿಯೇ ಬಂದು ಬಿಡುತ್ತಾನೆ. ತಾವು ಫೋನ್ ಮಾಡಿ ತಮ್ಮ ಸಂಬಂಧಿಕರಿಗೆ, ಆತ್ಮೀಯ ಮಿತ್ರರಿಗೆ ಫೋನ್ ಮಾಡಿ ಬರುವಂತೆ ತಿಳಿಸಿರಿ" ಎಂದ.

ಒಮ್ಮೆಲೇ ನನಗೆ ಕಿಡಕಿಯ ಕೆಳಗಡೆ ನಗುವುದು, ಮೋಜು ಮಾಡುವುದರ ಸದ್ದು ಕೇಳಿಸಿತು. ನನಗೆ ವಿಚಿತ್ರವೆನಿಸಿತು. ಸಿಟ್ಟೂ ಬಂದಿತು. ನಾನು ಕಿಟಕಿಯ ಬಳಿ ಹೋಗಿ ನೋಡಿದೆ. ನೆಲದ ಮೇಲೆ ಎರಡು ಆರೇಳು ಅಡಿಯ ಗಳಗಳನ್ನಿಟ್ಟು ಅವುಗಳ ಮೇಲೆ ಅಡ್ಡಡ್ಡ ಬಿದರಿನ ಪಟ್ಟಿಗಳನ್ನಿಟ್ಟು ಹಗ್ಗದಿಂದ ಕಟ್ಟಲು ಪ್ರಯತ್ನಿಸುತ್ತಿದ್ದರು. ಸಾಥಿಯಾ ಅವುಗಳನ್ನು ಸರಿಯಾಗಿ ಬಿಗಿಯಲು ಹೇಳುತ್ತಿದ್ದ.

ನನಗೆ ಸಾಥಿಯಾನ ಬಗೆಗೆ ಸಿಟ್ಟುಬರುತ್ತಿತ್ತು. ಪರಿಸ್ಥಿತಿಯ ಗಂಭೀರತೆಯನ್ನು ಈತ ಅರ್ಥಮಾಡಿಕೊಳ್ಳುತ್ತಿರಲಿಲ್ಲ. ಕಿಟಕಿಯಿಂದ ಬಾಗಿ ನಾನು ನೋಡುತ್ತಿರುವುದನ್ನು ಕಂಡು ಎಲ್ಲರೂ ಸ್ತಬ್ಧರಾದರು.

ಸಾಥಿಯಾ ಬರಲು ಹೇಳಿದ್ದ ಪುರೋಹಿತ ಸರಿಯಾದ ಸಮಯಕ್ಕೆ ಹಾಜರಾದ. ತಂದೆಯವರ ಶವವನ್ನು ಮನೆಯಿಂದ ಸ್ಮಶಾನಭೂಮಿಯವರೆಗೆ ಸಾಗಿಸಲಾಯಿತು. ಅಲ್ಲಿ ಅವರ ಅಂತ್ಯ ಸಂಸ್ಕಾರವನ್ನು ವಿಧಿಪೂರ್ವಕ ಸಂಪನ್ನಗೊಳಿಸಲಾಯಿತು.

ಅಂದಿನಿಂದ ಸಾಥಿಯಾ ಇದ್ದಕ್ಕಿದ್ದಂತೆ ಮಾಯವಾದ. ಮೆಟ್ಟಿಲುಗಳ ಕೆಳಗೆ ಆತನು ಮಲಗಲು ಬರಲಿಲ್ಲ. ಅವನ ಆ ತಗಡಿನ ಟ್ರಂಕೂ ಅಲ್ಲಿರಲಿಲ್ಲ. ಅವನು ಎಲ್ಲಿಗೆ ಹೋಗಿದ್ದಾನೆಂಬ ಚಿಂತೆ ನಮ್ಮನ್ನು ಕಾಡಿಸತೊಡಗಿತು.

ಒಂದು ದಿನ ಪೇಟೆಯಿಂದ ನಾನು ತರಕಾರಿ ತೆಗೆದುಕೊಂಡು ಮನೆಯತ್ತ ಹೆಜ್ಜೆ ಹಾಕುತ್ತಿದ್ದೆ. ದಾರಿಯಲ್ಲಿ ಸಾಥಿಯಾನನ್ನು ನೋಡಿದೆ. ಅವನು ಬಹಳ ಸೊರಗಿ ಹೋಗಿದ್ದ. ಕೈಯೊಳಗೆ ಕೋಲಿತ್ತು. ಅದರ ಸಹಾಯದಿಂದ ಅವನು ಮೆಲ್ಲಗೆ ಹೆಜ್ಜೆಯನ್ನಿಡುತ್ತಿದ್ದ. ನನ್ನನ್ನು ಕಂಡು ಆತ